ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ
ವಾರಪತ್ರಿಕೆ

SJ ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 26 ॥ ಸಂಚಿಕೆ : 17॥ Udp/1263/2015-17 || R.NO.50495/91 ॥ ತಾರೀಕು : 10–05–2016 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

## ಒಳಚರಂಡಿ ಯೋಜನೆ ಕಾಮಗಾರಿ ಆರಂಭ





ಕುಂದಾಪುರದಲ್ಲಿ ಕಳೆದ ಐದು ವರ್ಷಗಳಿಂದ ನಿರೀಕ್ಷಿಸುತ್ತಿದ್ದ ಒಳಚರಂಡಿ ಯೋಜನೆ ಕಾಮಗಾರಿ ಕೊನೆಗೂ ಆರಂಭಗೊಂಡಿದೆ. ಕುಂದಾಪುರದ ಹಲವು ರಸ್ತೆಗಳಲ್ಲಿ ಕಾಮಗಾರಿ ನಡೆಯುತ್ತಿದ್ದು ಈ ಕಾಮಗಾರಿಯ ಬಗ್ಗೆ ಸಾರ್ವಜನಿಕರಿಗೆ ಸರಿಯಾದ ಮಾಹಿತಿ ಇರದಿರುವುದು ಹಲವು ಊಹಾಪೋಹಗಳಿಗೆ ಕಾರಣವಾಗುತ್ತಿದೆ. ರಸ್ತೆ ನಡುವೆಯೇ ಚರಂಡಿ ತೆಗೆದು ಪೈಪುಗಳನ್ನು ಅಳವಡಿಸುವುದು ಕಾಂಕ್ರಿಟ್ ರಸ್ತೆಯನ್ನು ಸಂಪೂರ್ಣವಾಗಿ ಹಾಳುಮಾಡಿದಂತೆ ಆಗುತ್ತಿದೆ ಎಂದು ಹಲವರ ದೂರು ಆದರೆ ಇನ್ನು ಕೆಲವರು ಒಳಚರಂಡಿಗಾಗಿ ಅಳವಡಿಸಿದ ಪೈಪುಗಳು ಕೇವಲ ಆರು ಇಂಚು ಇದ್ದು ಇದು ನೀರು ಹರಿವಿನ ರಭಸಕ್ಕೆ ಸಾಕಾಗುತ್ತದೆಯೇ ಎಂದು ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ಈಗಾಗಲೇ ಸೂರ್ನಳ್ಳಿ – ಒಂಭತ್ತುದಂಡಿಗೆ , ಈಸ್ಟ್‌ಬ್ಲಾಕ್ ರಸ್ತೆಗಳಲ್ಲಿ ಕಾಮಗಾರಿ ನಡೆಯುತ್ತಿದ್ದು ಹತ್ತಿರದ ನಿವಾಸಿಗಳು ಈ ಬಗ್ಗೆ ಏನು ಅರ್ಥವಾಗದೆ ತಲೆಕೆಡಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಸಾರ್ವಜನಿಕರಿಗೆ ಬಿಡಿ ಪತ್ರಕರ್ತರಿಗೂ ಸರಿಯಾದ ಮಾಹಿತಿಯನ್ನು ಸಂಬಂಧಪಟ್ಟವರು ಈ ತನಕ ನೀಡಿಲ್ಲ ಎಂಬ ಆರೋಪ ಇದೆ. ಪುರಸಭೆಯವರು ಈ ಬಗ್ಗೆ ಸರಿಯಾದ ಮಾಹಿತಿಯನ್ನು ಸಂಬಂಧಪಟ್ಟ ಒಳಚರಂಡಿ ಅನುಷ್ಠಾನ ಮಾಡುವ ಅಧಿಕಾರಿಗಳಿಂದ ಹೇಳಿಸಬೇಕಾದುದು ಅಗತ್ಯವಾಗಿದೆ. (ಚಿತ್ರದಲ್ಲಿ ಪುರಸಭಾ ಅಧ್ಯಕ್ಷೆ ವಸಂತಿ ಸಾರಂಗ , ಉಪಾಧ್ಯಕ್ಷ ರಾಜೇಶ್ ಕಾವೇರಿ , ಒಳಚರಂಡಿ ಯೋಜನೆ ಹಾಗೂ ಮಳೆಗಾಲದಲ್ಲಿ ನೀರು ಸರಿಯಾಗಿ ಹರಿದುಹೋಗುವಂತೆ ಚರಂಡಿ ಸ್ವಚ್ಛತೆ ಕಾಮಗಾರಿ ವೀಕ್ಷಿಸುತ್ತಿರುವುದು)

## ಕುಂದಾಪುರ ತಾಲೂಕು ಪಂಚಾಯತ್ ಅಧ್ಯಕ್ಷರಾಗಿ ಜಯಶ್ರೀ ಮೊಗವೀರ , ಉಪಾಧ್ಯಕ್ಷರಾಗಿ ಪ್ರವೀಣ ಕುಮಾರ್ ಶೆಟ್ಟಿ ಕಡ್ಕೆ ಆಯ್ಕೆ




ಕುಂದಾಪುರ ತಾಲೂಕು ಪಂಚಾಯತ್ ಅಧ್ಯಕ್ಷೆಯಾಗಿ ಆಯ್ಕೆಯಾಗಿರುವ ಶ್ರೀಮತಿ ಜಯಶ್ರೀ ಸುಧಾಕರ ಮೊಗವೀರ M.S.W. & M.B.A ಸ್ನಾತಕೋತ್ತರ ಪದವಿಧರೆಯಗಿದ್ದು ಮೊಳಹಳ್ಳಿ ತಾಲೂಕು ಪಂಚಾಯತ್‌ನ ಸದಸ್ಯೆಯಾಗಿದ್ದಾರೆ.

ಇತರ ಸಾಮಾಜಿಕ ಚಟುವಟಿಕೆಗಳು:

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಾಜಿ ಕಾರ್ಯದರ್ಶಿ ಹಾಲಾಡಿ ಶಂಕರನಾರಾಯಣ ಘಟಕದ ಮೊಗವೀರ ಮಹಿಳಾ ಸಂಘಟನೆಯ ಸಕ್ರೀಯ ಕಾರ್ಯಕರ್ತೆ ಏಡ್ಸ್ ಜನಜಾಗೃತಿ ಜಾಥಾ, ರಕ್ತದಾನ ಶಿಬಿರ, ಮಹಿಳಾ ಸಬಲೀಕರಣ ಮತ್ತು ಕಾನೂನು ಅರಿವು ಕಾರ್ಯಕ್ರಮ, ನೇತ್ರ ತಪಾಸಣಾ ಶಿಬಿರ, ದಾನಿಗಳಿಂದ ಬಡವರಿಗೆ ಕನ್ನಡಕ ವಿತರಣೆ, ಮಳೆ ನೀರು ಕೊಯ್ಲು, ಜಲ ಮರುಪೂರ್ಣ ಕಾರ್ಯಕ್ರಮ ಹೀಗೆ ಸಮಾಜ ಮುಖಿ ಚಟುವಟಿಕೆಯಲ್ಲಿ ಪಾಲ್ಗೊಂಡು ಬಿಜೆಪಿಯಲ್ಲಿ ಸಕ್ರೀಯರಾಗಿದ್ದು ಸಾಮಾಜಿಕ ಕಾರ್ಯಕರ್ತೆಯಾಗಿ ಸೇವೆ ಸಲ್ಲಿಸಿದವರು.

ನಾಡಾ ತಾಲೂಕು ಪಂಚಾಯತ್ ಸದಸ್ಯರಾಗಿರುವ ತಾ.ಪ. ಉಪಾಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ ನಾಡಾ ಗ್ರಾಮ ಪಂಚಾಯತ್ ಗೆ ಮೂರು ಬಾರಿ ಸದಸ್ಯರಾಗಿ ಆಯ್ಕೆ, ಒಂದು ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ನಾಡಾ ಹಾಲು ಉತ್ಪಾದಕರ ಸಹಕಾರಿ ಸಂಘದ ನಿರ್ದೇಶಕನಾಗಿ ಮತ್ತು ಪಡುಕೋಣೆ ಸಹಕಾರಿ ಸಂಘಕ್ಕೆ ಎರಡು ಬಾರಿ ನಿರ್ದೇಶಕನಾಗಿ ಆಯ್ಕೆಯಾಗಿದ್ದು ಒಂದು ಅವಧಿಗೆ ಉಪಾಧ್ಯಕ್ಷನಾಗಿ ಸೇವೆ ಸಲ್ಲಿಸಿದ್ದರು.

ಕಳೆದ 20 ವರ್ಷದಿಂದ ಬಿಜೆಪಿಯ ಸಕ್ರೀಯ ಕಾರ್ಯಕರ್ತನಾಗಿದ್ದು ಯುವಮೋರ್ಚಾದ ರಾಜ್ಯ ಕಾರ್ಯಕಾರಿಣಿ ಸದಸ್ಯ ಹುದ್ದೆಯನ್ನು ಅಲಂಕರಿಸಿದವರು.




ಹಾರ್ದಿಕ ಶುಭಾಶಯಗಳು



ಶ್ರೀ ಕೆ.ಕೃಷ್ಣಮೂರ್ತಿ
ಅಧ್ಯಕ್ಷರು , ಕುಂದಾಪುರ ವ್ಯವಸಾಯ ಸೇವಾ ಸಹಕಾರಿ ಸಂಘ, (ನಿ), ಕುಂದಾಪುರ

ಕುಂದಾಪುರದ ಕುಂದೇಶ್ವರ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿರುವ "ಶತಮಾನೋತ್ಸವ" ಆಚರಿಸಿದ ಪ್ರತಿಷ್ಠಿತ ಕುಂದಾಪುರ ವ್ಯವಸಾಯ ಸೇವಾ ಸಹಕಾರಿ ಸಂಘ (ರಿ) ದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾ ಇವರ ಸೇವಾ ಅವಧಿಯಲ್ಲಿ ಸಂಸ್ಥೆ ಇನ್ನಷ್ಟು ಸಾಧನೆ ಮಾಡಲಿ ಎಂದು ಶುಭ ಹಾರೈಸುವ

ಶ್ರೀಮತಿ ಮತ್ತು ಶ್ರೀ ವಿ. ವಾಸುದೇವ ಹಂದೆ
"ಶ್ರೀದೇವಿ ಅಂಬ್ಯುಲೆನ್ಸ್ ಸರ್ವಿಸ್"
ಕುಂದಾಪುರ